ಕನಕದಾಸರಿಂದ ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ ಪ್ರತಿಪಾದನೆ :

ಅಂಧಂತಮಸು ಇನ್ನಾರಿಗೆ

ಗೋವಿಂದನ ನಿಂದಿಸುವರಿಗೆ | ಪ |

ಸಂದೇಹವಿಲ್ಲದೆ ಸಾರಿಸಾರಿಗೆ ವಾಯು

ನಂದನನ ವಂದಿಸದವರಿಗೆ | ಅ.ಪ |

Who will get "Andhantamassu" -

those who do the nindana of Govinda Undoubtedly those who do not do the vandana of Vaayu nandana.

ಮಾತು ಮಾತಿಗೆ ಹರಿಯ ನಿಂದಿಸಿ

ಸರ್ವೋತ್ತಮ ಶಿವನೆಂದು ವಾದಿಸಿ

ಧಾತುಗ್ರಂಥಗಳೆಲ್ಲ ತೋರಿಸಿ

ವೇದಾಂತ ಪ್ರಮಾಣಗಳ ಹಾರಿಸಿ

ಸೋತು ಸಂಕಟಪಟ್ಟು ಘಾತಕ ಒಡಲೊಳಗಿಟ್ಟು

ನೀತಿ ಹೇಳುವ ಕೆಟ್ಟ ಜಾತಿಗಳಿಗಲ್ಲದೆ | ೧ |

Who will get "Andhantamassu" -
Those who do the nindana of Srihari ;Those who say Shiva is sarvottama
based on taamasa puranaa quotes and those who discard Vedantha pramanaas

ಮೂಲಕವತಾರಕ್ಕೆ ಭೇದವು - ಮುಖ್ಯ

ಶೀಲ ಪಂಡಿತರೊಳಗೆ ವಿವಾದವು

ಲೀಲಾ ಸಾದೃಶ್ಯವು ತೋರುತ

ಲಿಂಗಭಂಗವಿಲ್ಲದ ದೇಹ ಹಾರುತ

ಮೂಲ ಗುರುವು ಕುಂತೀಬಾಲನೆನ್ನದೆ

ವೃಥಾ ಶೀಲಗೆಟ್ಟಂಥ ಖೂಳರಿಗಲ್ಲದೆ ಮತ್ತೆ | ೨ |

Who will get "Andhantamassu" -
Those who do the chintana of "Bedha" with the moola & avatara roopa of Srihari

Those who do the vivaada with sajjanas

Those who say saadrushya (aikya) with Brahma
Those who do not say that the moola guru is Bheemasena (kunteebaala) (madhwa)

ವ್ಯಾಸರ ಮಾತುಗಳಾಡುತ ವಿ-
ಶ್ವಾಸ ಘಾತಕರ ಮಾಡುತ
ದೋಷವೆಂದರೆ ನುಡಿ ಕೇಳದೆ ಸಂ-
ತೋಷವೆಂದರೆ ನೋಡಿ ಬಾಳದೆ
ಶೇಷಶಯನನಾದಿಕೇಷವರಾಯನ
ದಾಸರೊಡೆಯ ಮಧ್ವದ್ವೇಷಿಗಳಿಗಲ್ಲದೆ | ೩ |

Who will get "Andhantamassu" -
By quoting Vyasaru differently, misleading the people and for the madhwa dweshi.

---------------------------------------

one more song from Kanakadasaru :
(Stress on Mukyaprana devaru)

ಪರಮಪದವಿಯನೀವ ಗುರುಮುಖ್ಯ ಪ್ರಾಣನ
ಧರೆಯೊಳಗುಳ್ಳ ಮಾನವರೆಲ್ಲ ಭಜಿಸಿರೊ||ಪ||

ಅಂದು ತ್ರೇತಾಯುಗದಿ ಹನುಮನಾಗವತರಿಸಿ
ಬಂದು ದಾಶರಥಿಯ ಪಾದಕೆರಗಿ
ಸಿಂಧುವನು ದಾಂಟಿ ಮುದ್ರಿಕೆಯಿತ್ತು ದಾನವರ
ವೃಂದಪುರ ದಹಿಸಿ ಚೂಡಾಮಣಿಯ ತಂದವನ|೧|

ದ್ವಾಪರಯುಗದಲಿ ಭೀಮಸೇನನೆನಿಸಿ
ಶ್ರೀಪತಿಯಪಾದ ಕಡು ಭಜಕನಾಗಿ
ಕೋಪಾವೇಶದಲಿ ದುಶ್ಯಾಸನನನು ಸೀಳಿ
ಭೂಪನ ಜಲದೊಳಗೆ ಕರೆಕರೆದು ಜರೆದವನ|೨|

ಕಲಿಯುಗದಲಿ ತುರೀಯಾಶ್ರಮವನೆ ಧರಿಸಿ
ಕಲುಷದ ಮಾಯಿಗಳನೆ ಸೋಲಿಸಿ
ಖಿಲವಾದ ಮಧ್ವಮತವನು ಬಲಿದೆನಿಸಿ ಕಾಗಿ
ನೆಲೆಯಾದಿಕೇಶವನೆ ಪರದೈವನೆಂದವನ|೩|

-----------------------------------------------------
दासदासर मनेय दासानुदास नानु

ಕನಕದಾಸರು
ರಾಗ:ಶಂಕರಾಭರಣ ತಾಳ:ಅಟ

ದಾಸದಾಸರ ಮನೆಯ ದಾಸಾನುದಾಸ ನಾನು
ಶ್ರೀಶ ಶ್ರೀರಂಗ ನಿಮ್ಮ ಮನೆಯ ದಾಸ || ಪಲ್ಲವಿ ||

ಕಾಳುದಾಸರ ಮನೆಯ ಆಳು ದಾಸ ನಾನುಯ್ಯ |
ಕೀಳುದಾಸನು ನಾನು ಕಿರಿಯ ದಾಸ ||
ಭಾಳಾಕ್ಷ ಮುಂತಾಗಿ ಭಜಿಪ ದೇವರಮನೆಯ |
ಆಳಿನ ಆಳಿನ ಆಳಿನಡಿದಾಸ ನಾನು || ೧ ||

ಪಂಕಜನಾಭನ ಮನೆಯ ಮಂಕುದಾಸನಯ್ಯ |
ಕೊಂಕುದಾಸನು ನಾನು ಕುರುಡು ದಾಸ ||
ಸಂಕೀರ್ತನೆಯ ಮಾಡಿ ನೆನೆವ ಭಕ್ತರ ಮನೆಯ |
ಬಿಂಕದ ಬಾಗಿಲ ಕಾಯ್ವ ಬಡದಾಸ ನಾನು || ೨ ||

ಹಲವು ದಾಸರ ಮನೆಯ ಹೊಲೆದಾಸ ನಾನಯ್ಯ |
ಕುಲವಿಲ್ಲದ ದಾಸ ಕುನ್ನಿದಾಸ ||
ಮಲಹರ ರಂಗ ನಿನ್ನ ಮನೆಯ ಮಾದಿಗ ದಾಸ |
ಸೆಲೆಮುಕ್ತಿ ಪಾಲಿಸೊ ಆದಿಕೇಶವರಾಯ || ೩ ||

-------------------------------------------

ತನು ನಿನ್ನದು ಜೀವನ ನಿನ್ನದು ಸ್ವಾಮಿ
ಅನುದಿನದಿ ಬಾಹೊ ಸುಖ ದುಃಖ ನಿನ್ನದಯ್ಯ || ೧ ||

ಸವಿನುಡಿ ವೇದ ಪುರಾಣ ಶಾಸ್ತ್ರಗಳೆಲ್ಲ
ಕಿವಿಗೊಟ್ಟು ಕೇಳುವ ಸ್ಥಿತಿ ನಿನ್ನದು
... ನವಮೋಹನಾಂಗಿಯರ ರೂಪವ ಕಣ್ಣಿಂದ

ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯ || ೧ ||

ಒಡಗೂಡಿ ಗಂಧ ಕಸ್ತೂರಿ ಪರಿಮಳವೆಲ್ಲ
ಬಿಡದೆ ಲೇಪಿಸಿಕೊಂಬುವುದು ನಿನ್ನದು
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
ಕಡುರುಚಿಗೊಂಬುವ ಆ ಸವಿ ನಿನ್ನದಯ್ಯ || ೨ ||

ಮಾಯಪಾಶದ ಬಲೆಗೊಳು ಸಿಕ್ಕಿ ತೊಳಲುವ
ಕಾಯ ಪಂಚೇದ್ರಿಯದ ಗತಿ ನಿನ್ನದು
ಕಾಯಜಪಿತ ಕಾಗಿನೆಲೆಯಾದಿ ಕೇಶವ
ರಾಯ ನೀನಲ್ಲದೆ ನರರು ಸ್ವತಂತ್ರರೇ || ೩ ||

----------------------

ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ
ನೀ ದೇಹದೊಳಗೊ ನಿನ್ನೊಳು ದೇಹವೊ

ಬಯಲು ಆಲಯದೊಳಗೊ ಆಲಯವು ಬಯಲೊಳಗೊ
ಬಯಲು ಆಲಯವೆರಡು ನಯನದೊಳಗೊ
... ನಯನ ಬುದ್ಧಿಯೊಳಗೊ ಬುದ್ಧಿ ನಯನದೊಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ || 1 ||

ಸವಿಯು ಸಕ್ಕರೆಯೊಳಗೊ ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಗಳೆರಡು ಜಿಹ್ವೆಯೊಳಗೊ
ಜಿಹ್ವೆ ಮನಸಿನೊಳಗೊ ಮನಸು ಜಿಹ್ವೆಯೊಳಗೊ
ಜಿಹ್ವೆ ಮನಸುಗಳೆರಡು ನಿನ್ನೊಳಗೊ ಹರಿಯೆ || 2 ||

ಕುಸುಮದೊಳು ಗಂಧವೊ ಗಂಧದೊಳು ಕುಸುಮವೊ
ಕುಸುಮ ಗಂಧಗಳೆರಡು ಘ್ರಾಣದೊಳಗೊ
ಅಸಮಭವ ಕಾಗಿನೆಲೆಯಾದಿಕೇಶವರಾಯ
ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೊ || 3 ||

---------------------]

ಏನೆಂದು ನುಡಿವೆ ನಿನ್ನವರಂತೆ ಕೇಡುಬುದ್ಧಿ ಎನಗಿಲ್ಲ ಗುಣ
ಹೀನರಲ್ಲದ ಈ ನರರ ಪಾಲಿಪ ಬುದ್ಧಿ ನಿನಗಿಲ್ಲ ||ಪ||

ತರಳ ಪ್ರಹ್ಲಾದನಂದದಿ ನಿನ್ನ ರೂಪ ಕೆಡಿಸಲಿಲ್ಲ
ನರನಂತೆ ಬಂಡಿ ಬೋವನ ಮಾಡಿ ನಿನ್ನ ದಂಡಿಸಲಿಲ್ಲ ಪರಾ
ಶರನಂತೆ ನದಿಯೊಳಿದ್ದ ಹೆಣ್ಣ ಕೂಡಲಿಲ್ಲ
ಗರುಡನಂದದಿ ನಿನ್ನ ಪೊತ್ತು ತಿರಗಲಿಲ್ಲ |೧|

ಸನಕಾದಿ ಮುನಿಯಂತೆ ವನದೊಳು ಅನುದಿನ ಚರಿಸಲಿಲ್ಲ
ಬಿನುಗು ಬೇಡತಿಯಂತೆ ಸವಿದುಂಡ ಹಣ್ಣು ತಿನಿಸಲಿಲ್ಲ
ಇನಕುಲದ ಕಪಿಯಂತೆ ವಂಚಿಸೀ ವಾಲಿಯನು ಕೊಲಿಸಲಿಲ್ಲ
ಘನಪಾತಕದಜಾಮಿಳನಂತೆ ನಾರಗಾ ಎನಲಿಲ್ಲ |೨|

ಕದನದೊಳು ವಿಭೀಷಣನಂತೆ ಅಣ್ಣನನು ಕೊಲಿಸಲಿಲ್ಲ
ವಿದುರನಾ ತರನಂತೆ ಸದನವ ಮುರಿದು ನಿನ್ನ ಬೆರೆಯಲಿಲ್ಲ
ಮದಗಜನಂತೆ ಮಕರಿಗೆ ಸಿಲುಕಿ ಒರಲಲಿಲ್ಲ
ಗದರಿ ಶಿಶುಪಾಲನಂದದಿ ನಿನ್ನನುಪೇಕ್ಷಿಸಿ ಜರೆಯಲಿಲ್ಲ|೩|

ಭುವಿಯೊಳು ಬಲಿಯಂತೆ ದಾನವ ನೀಡಲಿಲ್ಲ
ಭವನಂತೆ ಶ್ಮಶಾನದಿ ಮನೆಮಾಡಿ ಸ್ಮರಿಸಲಿಲ್ಲ
ತವ ಪುಂಡರೀಕನಂತೆ ಹಲಗೆಯಿಟ್ಟಿಗೆ ಮೇಲೆ ನಿಲ್ಲಿಸಲಿಲ್ಲ
ಭುವನದೊಡೆಯ ನೆಲೆಯಾದಿಕೇಶವನ ಮರೆಯಲಿಲ್ಲ |೪|

In most of the devaranamaas, Sri Kanakadasaru has established the supremacy of Srihari only.